**ದಿಃ26-11-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಎಲ್.ಕೆ.ಎಸ್. ವಕೀಲರಿಂದಃ**

ಅರ್ಜಿದಾರರು ನಮ್ಮ ಗ್ರಾಮದವರು ಎಂದರೆ ಸರಿ. 2 ನೇ ಎದುರುದಾರರು ಸಹ ನಮ್ಮ ಗ್ರಾಮದವರೆ ಎಂದರೆ ಸರಿ. ಘಟನೆ ದಿನಾಂಕ 26.06.2018 ರಂದು ನಡೆದಿದೆ ಎಂದರೆ ಸರಿ. ಘಟನೆಯ ಕುರಿತು ಹೊಳಲ್ಕೆರೆ ಪೊಲೀಸರು ನನ್ನ ಮತ್ತು 2 ನೇ ಎದುರುದಾರರ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ದಿನಾಂಕ 14.04.2019 ರಂದು ಘಟನೆಯ ಕುರಿತು ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

2. ಸಾಕ್ಷಿಗೆ ತನಿಖಾಧಿಕಾರಿಗಳ ಸಮಕ್ಷಮ ನೀಡಿರುವ ಹೇಳಿಕೆಯಲ್ಲಿನ ಸಹಿಯನ್ನು ತೋರಿಸಲಾಗಿ, ಸಾಕ್ಷಿ ಸದರಿ ಸಹಿಯನ್ನು ಪೊಲೀಸರು ನಮ್ಮ ಊರಿಗೆ ಬಂದಾಗ ಪಡೆದಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ತೋರಿಸಲಾದ ದಾಖಲಾತಿಯನ್ನು ನಿಪಿ.26 ಎಂದು ಗುರುತಿಸಲಾಯಿತು. ನಾನು ನೀಡಿರುವ ನಿಆರ್.1 ರ ಮನವಿಯ ಕುರಿತಾಗಿ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ರವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ತನಿಖಾಧಿಕಾರಿಗಳು ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂಬ ಬಗ್ಗೆ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸುವ ಕುರಿತು ನಾನು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ನಿ.ಆರ್.1 ರ ನಿವೇದನೆಯನ್ನು ನೀಡಿದ ನಂತರದಲ್ಲಿ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ರವರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನಿಆರ್.1 ರ ನಿವೇದನೆಯನ್ನು ನೀಡಿದ ನಂತರ ನಾನು ಪೊಲೀಸ್ ಅಧೀಕ್ಷಕರು, ಚಿತ್ರದುರ್ಗರವರ ಕಛೇರಿಗೆ ಪುನಃ ಹೋಗಿ ವಿಚಾರಣೆ ಮಾಡಿಲ್ಲ. ನಾನು ನಿಆರ್.1 ರಂತೆ ನಿವೇದನೆಯನ್ನು ನೀಡಿದ ನಂತರ ತನಿಖಾಧಿಕಾರಿಗಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3. ನಾನು ಅರ್ಜಿದಾರರನ್ನು ತೆಂಗಿನ ತೋಟದ ಮಟ್ಟೆಯನ್ನು ತುಂಬಲು ಕರೆದುಕೊಂಡು ಹೋಗಿದ್ದೆನು ಎಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನಾನು ಅರ್ಜಿದಾರನ್ನು ನಮ್ಮ ತೋಟಕ್ಕೆ ಕರೆದುಕೊಂಡು ಹೋಗಿಲ್ಲ ಎಂದು ಹೇಳುತ್ತಾರೆ. ನಾನಗರಾಜ್ ಬಿನ್ ಮಂಜಪ್ಪ ನಮ್ಮ ಊರಿನವರು. ನಾಗರಾಜ ಬಿನ್

ಮಂಜಪ್ಪರವರನ್ನು ಸಹ ನಾನು ನಮ್ಮ ತೋಟಕ್ಕೆ ಕೂಲಿಗೆ ಕರೆದುಕೊಂಡು ಹೋಗಿದ್ದೆನು ಎಂದರೆ ಸರಿಯಲ್ಲ. 2 ನೇ ಎದುರುದಾರರಿಗೆ ಸೇರಿದ ಕೆ.ಎ.16-ಟಿ.ಎ.-6357 ರ ಟ್ರಾಕ್ಟರ್ ಇಂಜಿನ್ ಮತ್ತು ಟ್ರೈಲರ್‌ನ್ನು ನಾನು ತೆಂಗಿನ ಮಟ್ಟೆಯನ್ನು ತುಂಬಲು 2 ನೇ ಎದುರುದಾರರ ಅನುಮತಿಯ ಮೇರೆಗೆ ತೆಗೆದುಕೊಂಡು ಹೋಗಿದ್ದೆನು ಎಂದರೆ ಸಾಕ್ಷಿ ಅರ್ಜಿದಾರರು ನನ್ನ ಬಳಿ ಕೆಲಸಕ್ಕೆ ಬಂದಿಲ್ಲ ಹಾಗಾಗಿ ನಾನು ಟ್ರಾಕ್ಟರ್‌ನ್ನು ತೆಗೆದುಕೊಂಡು ಹೋಗಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರರು ನನ್ನ ಸೂಚನೆಯ ಮೇರೆಗೆ ತೆಂಗಿನ ಮಟ್ಟೆಯನ್ನು ಟ್ರಾಕ್ಟರ್‌ಗೆ ತುಂಬುತ್ತಿದ್ದರು ಎಂದರೆ ಸಾಕ್ಷಿ ಅರ್ಜಿದಾರರು ನನ್ನ ಬಳಿ ಕೆಲಸಕ್ಕೆ ಬಂದಿಲ್ಲ, ಹಾಗಾಗಿ ಮಟ್ಟೆಯನ್ನು ತುಂಬುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರರನ್ನು ತೆಂಗಿನ ಮಟ್ಟೆಯನ್ನು ತುಂಬಲು ನಾನು ಟ್ರಾಕ್ಟರ್‌ನ ಮೇಲೆ ನಿಲ್ಲಿಸಿದ್ದು, ನಾಗರಾಜು ಕೆಳಗೆ ನಿಂತಿದ್ದು, ಅಗ್ಗವನ್ನು ಎಳೆಯುವಾಗ ಸದರಿ ಅಗ್ಗ ತುಂಡಾಗಿ ಅರ್ಜಿದಾರರು ನನ್ನ ನಿರ್ಲಕ್ಷತೆಯಿಂದ ಕೆಳಗೆ ಬಿದ್ದು ಗಾಯಗೊಂಡಿರುತ್ತಾರೆ ಎಂದರೆ ಸಾಕ್ಷಿ ನಾನು ಅರ್ಜಿದಾರರನ್ನು ಕೆಲಸಕ್ಕೆ ಕರೆದುಕೊಂಡಿರಲಿಲ್ಲ ಎಂದು ಹೇಳುತ್ತಾರೆ.

4. ಘಟನೆಯ ನಂತರದಲ್ಲಿ ಅರ್ಜಿದಾರರನ್ನು ನಾನು ಮತ್ತು ನಾಗರಾಜ್‌ರವರು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರರು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡು, ನಂತರ ಮಂಗಳೂರಿನಲ್ಲಿ ಹೆಚ್ಚಿನ ಚಿಕಿತ್ಸೆಯನ್ನು ಪಡೆದಿದ್ದು, ಈಗ ಖಾಯಂ ಆಗಿ ಓಡಾಡಲು ಸಾಧ್ಯವಾಗದೆ ವಿಶ್ರಾಂತಿಯನ್ನು ಪಡೆಯುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಘಟನೆಯ ಸಮಯದಲ್ಲಿ ಅರ್ಜಿದಾರರಿಗೆ ಪ್ರಜ್ಞೆ ತಪ್ಪಿತ್ತು ಎಂದರೆ ಸಾಕ್ಷಿ ನನ್ನ ಸಮಕ್ಷಮದಲ್ಲಿ ಯಾವುದೇ ಘಟನೆ ನಡೆಯದ ಕಾರಣ ಆತನಿಗೆ ಏನು ಆಗಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

5. ಮಂಜುನಾಥ ಬಿನ್ ಮುರುಗೇಂದ್ರಪ್ಪ ನಮ್ಮ ಊರಿನವರು, ಆದರೆ ಅವರು ನನಗೆ ಅಷ್ಟಾಗಿ ಪರಿಚಯ ಇಲ್ಲ. ನಿಪಿ.2 ರ ದೂರಿನಂತೆ ನಾನು ಕೆ.ಎ.16-ಇ.ಎಫ್.-6937 ರ ಬೈಕನ್ನು ಚಾಲನೆ ಮಾಡಿಕೊಂಡು ಬಂದು ಅರ್ಜಿದಾರರಿಗೆ ಡಿಕ್ಕಿಪಡಿಸಿದ್ದೆನು ಎಂದು ದೂರನ್ನು ನೀಡಿದ್ದರು ಎಂದರೆ ಸಾಕ್ಷಿ ಆ ರೀತಿ ಸುಳ್ಳು ದೂರನ್ನು ನೀಡಿದ್ದು, ಅದೇ ದಿನ ನಾನು ಜಿಲ್ಲಾ ವರಿಷ್ಠಾಧಿಕಾರಿಗಳು, ಚಿತ್ರದುರ್ಗ ರವರಿಗೆ ದೂರನ್ನು ನೀಡಿದ್ದೆನು ಎಂದು ಹೇಳುತ್ತಾರೆ. ನಿಪಿ.2 ರ ದೂರನ್ನು ನೀಡುವ ಸಮಯದಲ್ಲಿ ಅರ್ಜಿದಾರರು ಆತನ ಕುಟುಂಬದೊಂದಿಗೆ ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನಾಗರಾಜು ಸೇರಿಕೊಂಡು ಮಂಜುನಾಥ್‌ರವರ ಮೂಲಕ ಬೈಕಿನಿಂದ ಅಪಘಾತ ಆಗಿದೆ ಎಂದು ಸುಳ್ಳು ದೂರನ್ನು ಕೊಡಿಸಿದ್ದೆನು ಎಂದರೆ ಸರಿಯಲ್ಲ. ಎಸ್.ರವಿ ಬಿನ್ ಶಿವಲಿಂಗಪ್ಪ ನಮ್ಮ ಊರಿನವರು. ಹೆಚ್.ರಮೇಶ್ ಬಿನ್ ಹನುಮಂತಪ್ಪ ನನಗೆ ಗೊತ್ತಿಲ್ಲ. ಕೆ.ಎ.16-ಇ.ಎಫ್.-6937 ರ ಬೈಕು ನನ್ನ ತಮ್ಮನಿಗೆ ಸೇರಿತ್ತು. ಎಂ.ರವಿ ಎಂದರೆ ನನ್ನ

ತಮ್ಮ. ಕೆ.ಎ.16-ಇ.ಎಫ್.-6937 ರ ಬೈಕನ್ನು ನಾನು ಠಾಣೆಗೆ ಹಾಜರಾಗಿ ಮಧ್ಯಂತರ ವಶಕ್ಕೆ ಪಡೆದಿರುತ್ತೇನೆ ಎಂದರೆ ಸರಿ. ಅರ್ಜಿದಾರರು 3 ತಿಂಗಳ ಕಾಲ ಆಸ್ಪತ್ರೆಯಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರು ಚಿಕಿತ್ಸೆಯನ್ನು ಪಡೆದುಕೊಂಡು ಬಂದ ನಂತರ ದಿ.02.08.2018, 14.04.2019 ರಂದು ತನಗೆ ಆದಂತಹ ಗಾಯದ ಕುರಿತು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರ ಚಿಕಿತ್ಸೆಯ ವೆಚ್ಚದ ಕುರಿತು ನಾನು ಯಾವುದೇ ಹಣವನ್ನು ಭರಿಸಿಲ್ಲ ಎಂದರೆ ಸಾಕ್ಷಿ ನನಗೆ ಅಪಘಾತದ ಬಗ್ಗೆ ಮತ್ತು ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದ ಕಾರಣ ಅರ್ಜಿದಾರರು ನನ್ನ ಜಮೀನಿಗೆ ಯಾವುದೇ ಕೆಲಸಕ್ಕೆ ಬಾರದ ಕಾರಣ ನಾನು ಭರಿಸಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರರು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿದ ನಂತರ ತನಿಖಾಧಿಕಾರಿಗಳು 2 ನೇ ಎದುರುದಾರರಿಗೆ ಸೇರಿದ ಟ್ರಾಕ್ಟರ್‌ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜಾಗರೂಕತೆಯಿಂದ ಮಟ್ಟೆಯನ್ನು ತುಂಬುವಾಗ ಅರ್ಜಿದಾರರು ಬಿದ್ದು ಗಾಯಗೊಂಡಿದ್ದಾರೆ ಎಂದು ತನಿಖಾಧಿಕಾರಿಗಳು ನನ್ನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಘಟನೆಯ ಕುರಿತು ನಮ್ಮ ಜಮೀನಿಗೆ ಬಂದು ಮಹಜರನ್ನು ಮಾಡಿದ್ದಾರೆ ಎಂದರೆ ಸಾಕ್ಷಿ ನಾನು ಇಲ್ಲದಿದ್ದಾಗ ಬಂದು ಮಾಡಿದ್ದಾರೆ ಎಂದು ಹೇಳುತ್ತಾರೆ. ಘಟನೆಯ ಕುರಿತು ಅರ್ಜಿದಾರರು ಮತ್ತು ಆತನ ಸಂಬಂಧಿಕರು ತನಿಖಾಧಿಕಾರಿಗೆ ಆ ನಂತರ ಹೇಳಿಕೆಗಳನ್ನು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾಗರಾಜು ಸಹ ಘಟನೆಯ ಸಮಯದಲ್ಲಿ ಇದ್ದರು ಎಂದು ಪರಿಗಣಿಸಿ ದೋಷಾರೋಪಣ ಪಟ್ಟಿಯಲ್ಲಿ ಪ್ರತ್ಯಕ್ಷ ಸಾಕ್ಷಿದಾರರನ್ನಾಗಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಪರಿಹಾರವನ್ನು ನೀಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಅರ್ಜಿದಾರರು 2 ನೇ ಎದುರುದಾರರ ಟ್ರಾಕ್ಟರ್‌ನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ಅರ್ಜಿದಾರರು ನಮ್ಮ ಊರಿನಲ್ಲಿ ಟ್ರಾಕ್ಟರ್‌ನ್ನು ಚಾಲನೆ ಮಾಡುತ್ತಿದ್ದರು ಎಂದು ಹೇಳುತ್ತಾರೆ.

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಬಿ.ಎನ್.ಪಿ. ವಕೀಲರಿಂದ**

ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ